Demolition of Houses in Belgaum City Municipal Area

444 (650)SRI B. B. SAYANAK (Belgaum) Will the Minister for Law and Municipal Administration be pleased to state:—

(*a*) whether it is a fact that the Municipal authorities had demolished 20 houses in Belgaum City Municipal area in the months of November and December 1975 ;

(*b*) if so, the reason ;

(*c*) whether many houses have been constructed in Azam-Nagar without permission from the Municipality ;

(*d*) if so, the number of such houses demolished by the Municipal Authority ;

(*e*) whether it is a fact that a permanent masonry work is going on in S. No. 1364/A in plot No. 27 on a sanctioned Road ?

SRI D. K. NAIKAR.—Minister for Law and Municipal Administration.

(*a*) No.

(*b*) Does not arise.

(*c*) No.

(*d*) Does not arise.

(*e*) No.

CALLING ATTENTION TO MATTERS OF URGENT PUBLIC IMPORTANCE

(*i*) *re : atrocities by Police Kemmannagundi on 14th March 1976*

SRI M. MALLAPPA (Birur),— Madam Speaker, I call the attention of the Hon'ble Chief Minister about the atrocities committed by the Police on respectable citizens on 14th March 1976 at Kemmannagundi.

SRI H. M. CHANNABASAPPA (Minister for Public Works).— Madam Speaker, on behalf of the Hon'ble Chief Minister, I would like to make the following statement:

On 13th March 1976, the Superintendent of Police, Chikmagalur, received information that the members of the Chikmagalur Friends Recreation Club (CFRA) had proceeded to Kemmannagundi and were indulging in gambling. On receipt of information, the Superintendent of Police, Chikmagalur, accompanied by the Deputy Superintendent of Police, Chikmagalur, and staff proceeded to Kemmannagundi along

with Panchayatdars and found 93 persons playing card game called "Andar-Bahar". which is game of chance by betting money at the car parking area under the electric light at about 1-00 a m. on 14th March 1976. In this connection, 90 persons were arrested while 3 persons absconded, and cash of 4,611/- was seized along with 52 playing cards and other incriminating articles under a mahazar.

In the course of the aforesaid raid by the Police at Kemmannagundi and at the time of apprehending the 90 accused persons, five accused persons are said to have sustained minor injuries. One person sustained fracture of ankle by accident and another has sustained fracture of two fingers.

A case was registered in Lingadaballi Police Station Cr No. 13/76 U/S 89 of the Karnataka Police Act. 90 persons were immediately released on bail at 11-00 a m on 14th March 1976. Further investigation of this case and enquiry into the allegations of atrocities is being conducted by a Superintendent of Police of the Corps of Detectives, Bangalore

ಶ್ರೀ ಎಂ. ಮಲ್ಲಪ್ಪ.—ಮೊಟ್ಟಮೊದಲನೆಯದಾಗಿ ತಮ್ಮ ಸ್ಟೇಟ್‌ಮೆಂಟಿನಿಂದ ಪೂರಾ ನಿಜಾಂಶ ಹೊರಬಿದ್ದಿಲ್ಲವೆಂದು ಹೇಳುವುದಕ್ಕೆ ನನಗೆ ವಿಷಾದವಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿವು ಏನು ಬೇಕಾದರೂ ಕೇಳಿ ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಕೆಮ್ಮಣ್ಣುಗುಂಡಿ ಪ್ರವಾಸಿ ಕೇಂದ್ರ ಫ್ರೆಂಡ್ಸ್ ಯೂನಿಯನ್ ಅವರು ಯಾವ ರೀತಿ ವರ್ಷಂಪ್ರತಿ ಹೊಗುತ್ತಿದ್ದರೋ ಅದೇ ರೀತಿಯಲ್ಲಿ ಈ ವರ್ಷವೂ ಅಲ್ಲಿಗೆ ಹೋಗಿ ಕಾಲಕಳೆದು ಬರಬೇಕೆಂದು ಹೋಗಿದ್ದು ನಿಜ. ಅಲ್ಲಿಗೆ ರಾತ್ರಿ ಒಂದು ಘಂಟೆಯ ಮೇಲೆ 60ಜನ ಪೋಲೀಸರು ಹೊಗಿ ಪ್ರವಾಸಮಂದಿರದಲ್ಲಿ ಮಲಗಿದ್ದವರನ್ನು ಏಳಿಸಿ ಅದರ ಹತಿರ ಇದ್ದಂಥ ದುಡ್ಡನ್ನು ಕಸಿದುಕೊಂಡು ಹೆದರಿಸಿ,ಬೆದರಿಸಿ ಅವರನ್ನು ಹೊಡೆದಿದಾರೆ. ಬೆದರಿಸಿ ಇಷ್ಟೆಲ್ಲಾ ಆದರೂ ಕೂಡ ಈ ಕೃತ್ಯ ನಡೆದು 20ದಿನಗಳಾದರೂ ಕೂಡ ತಪ್ಪಿತಸ್ಥರ ಮೇಲೆ ಇದುವರೆಗೆ ಯಾವ ಕ್ರಮ ವನ್ನೂ ತೆಗೆದುಕೊಂಡಿಲ್ಲ ಇವರ ಬಗ್ಗೆ ಈಗಾಗಲೇ ಐ.ಜಿ ಪಿ.ಅವರಿಗೆ ಅರ್ಜಿ ಕೊಟ್ಟಿದ್ದೇವೆ. ಸಂಬಂಧ ಪಟ್ಟವರಿಗೂ ದೂರುಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಿಗೂ ಅರ್ಜಿ ಕೊಟ್ಟಿದ್ದೇವೆ ಇಷ್ಟಾದ ಮೇಲೆ ಈಗ ಸಿ.ಓ.ಡಿ. ಅವರು ವಿಚಾರಣೆಮಾಡುತ್ತಿದ್ದಾರೆಂದರೆ ನನಗೆ ಆಶ್ಚರ್ಯವಾಗುತ್ತದೆ

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿವುಗೆ ಏನು ಇನ್‌ಫರ್‌ಮೇಷನ್ ಬೇಕೋ ಕೇಳಿ.

ಶ್ರೀ ಕೋಣಂದೂರು ಲಿಂಗಪ್ಪ.—ನೀವು ಸತ್ಯಕ್ಕೆ ದೂರವಾದ ವಿಷಯವನ್ನು ಹೇಳುತ್ತಿದ್ದೀರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಪ್ಪ.—ತಾವು ಹೇಳಿದಹಾಗೆ ಇಷ್ಟೊಂದು ಜನ ಪೋಲೀಸಿನವರು ಅಲ್ಲಿಗೆ ಆಷ್ಟು ಮಧ್ಯರಾತ್ರಿಯಲ್ಲಿ ಏಕೆ ಹೋಗಿದ್ದರು? ಅವರಿಂದ ರೂ.4,611-00 ಮಾತ್ರ ಕಲೆಕ್ಟ್ ಆಗಿದೆಯೆಂದು ಹೇಳಿದ್ದೀರೀ. ನಾನು ತಮಗೆ ಹೇಳುವುದಾದರೆ, ಅಲ್ಲಿ ಮಲಗಿದ್ದ ಜನಗಳ ಗುಂಪನ್ನು ಏಳಿಸಿ ಅವರಿಂದ ಹಣವನ್ನು ವಸೂರುಮಾಡಿದ್ದು ಕೇವಲ 4,611 ರೂಪಾಯಿಗಳು ಎಂಬುದಾಗಿ ಹೇಳಿರುವುದು ನುಳ್ಳು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾಲ್ಕುಸಾವಿರ ರೂಪಾಯಿಗಳಲ್ಲಾ ಎಂದು ಹೇಳಿದಮೇಲೆ ಹಾಗಾದರೆ 40ಸಾವಿರ ರೂಪಾಯಿಗಳು ಇತ್ತೇ ?

ಶ್ರೀ ಎಂ. ಮಲ್ಲಪ್ಪ.—ಲಕ್ಷಾಂತರ ರೂಪಾಯಿಗಳು ಇತ್ತೆಂದು ನಾನು ಹೇಳುತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಲಕ್ಷಾಂತರ ರೂಪಾಯಿಗಳನ್ನು ತೆಗೆದುಕೊಂಡು ಹೋಗಿದ್ದಾರೇಯೇ ?

ಶ್ರೀ ಎಂ. ಮಲ್ಲಪ್ಪ.—ಹೌದು, ತಾವು ನ್ಯಾಯವಾಗಿ ಹೋಗಿ ಕಾರ್ಡ್ಸನ್ನೆಲ್ಲಾ ಸೀಜ್ ಮಾಡಿ ಇಲ್ಲಿ ಮ್ಯಾಜರ್ ಮಾಡಿದ್ದರೆ ಅದರ ಬಗ್ಗೆ ರೆಸ್‌ಪಾನ್ಸಿಬಲ್ ಪರ್ಸನ್ಸ್ ರುಜುಹಾಕಿದ್ದರೆ ಹೇಳಿ. ಹಣವನ್ನು ದೋಚಿರುವುದನ್ನೂ ಕೂಡ ನೀವು ಮರೆಮಾಚಿದ್ದೀರಿ. ಅದರ ಬಗ್ಗೆ ನಾನು ಚಾರ್ಜ್‌ಮಾಡುತ್ತೇನೆಂದು ಹೇಳಿದರೆ ಅದನ್ನಾ ನೀವು ಒಪ್ಪಬೇಕು. ಸಿ.ಓ.ಡಿ. ಅವರನ್ನು ಕಳುಹಿಸಿ ನಿಜವಾಗಿಯೂ ವಿಚಾರಣೆ ನಡೆಸಿದ್ದೀರಾ ? ಈಗ ಏನು ಇಲ್ಲ ಆ ವಿಷಯ ಹೊರಬಿದ್ದಿದೆಯೋ ಅದು ಸರಿಯಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಬೇಕಾದಷ್ಟು ಇನ್‌ಫರ್‌ಮೇಷನ್ ಇಲ್ಲಿ ಹೇಳಬೇಕಾದುದು ಇದೆ. ಮೊದಲನೆಯದಾಗಿ ಮಾನ್ಯ ಸದಸ್ಯರು ಹೇಳಿದಾಗ 60ಜನ ಪೋಲೀಸರು ಹೋಗಿದ್ದರೆಂದು ಹೇಳಿದ್ದು ಶುದ್ಧ ತಪ್ಪು. ಏನೋ ಖುಷಿಬಾಷಿಗೋಸ್ಕರ ಹೋದಂಥ ಜನ ಲಕ್ಷಾಂತರ ರೂಪಾಯಿಗಳನ್ನು ಜೇಬಿನಲ್ಲಿ ಏಕೆ ಹಾಕಿಕೊಂಡು ಹೊಗುತ್ತಾರೆಂಬುದನ್ನು ಈ ಸಭೆಯ ಸದಸ್ಯರೇ ಯೋಚನೆಮಾಡಬೇಕು. ಈ ರೀತಿಯಾಗಿ ಆಂಥವರು ತೆಗೆದುಕೊಂಡು ಹೊಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ,—ಅವರಲ್ಲಿ ಅನೇಕರು ವ್ಯಾಪಾರಿಗಳು, ವ್ಯವಹಾರಸ್ಥರು ಇದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂತಹ ಖುಷಿಭಾಷಿಗಳಿಗೆ ಏನೋ ಊಟ, ತಿಂಡಿ ತೆಗೆದುಕೊಂಡು ಹೋಗುವ ಜೊತೆಗೆ ಲಕ್ಷಾಂತರ ರೂಪಾಯಿಗಳನ್ನು ಏಕೆ ಅವರು ತೆಗೆದುಕೊಂಡು ಹೋಗಿದ್ದರು ? ಯಾವ ಉದ್ದೇಶಕ್ಕೋಸ್ಕರ ತೆಗೆದುಕೊಂಡು ಹೋಗಿದ್ದಾರೆ ? ಏನಾದರು ಜೂಜಿಗೋಸ್ಕರವೇ ಏನು ಎಂಬುದನ್ನು ವಿಚಾರಮಾಡಬೇಕಾಗಿತ್ತು.

ಶ್ರೀ ವಿ. ಎಂ. ಪಾಟೀರ್. — ಏನಾದರೂ ಅದರಲ್ಲಿ ಒಳನಂಚು ಇದ್ದರೆ ಅದನ್ನೂ ತಾವು ತಿಳಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೇ ನಾವು ತನಿಖೆ ಮಾಡುತ್ತಿದ್ದೇವೆ, ಎರಡನೆಯದಾಗಿ ಖುಷಿಬಾಷಿಗೋಸ್ಕರವಾಗಿ ಕಮ್ಮಣ್ಣುಗುಂಡಿಗೆ ರಾತ್ರಿ ಒಂದು ಘಂಟೆಯಲ್ಲಿ ಎದ್ದು ಖುಷಿಬಾಷಿ ಮಾಡುತ್ತಿದ್ದರೇ ಎಂಬ ಬಗ್ಗೆ ವಿಚಾರಮಾಡಬೇಕು. ಇದರ ಬಗ್ಗೆ ನಮಗೆ ಒಂದು ದೂರು ಕೂಡ ಬಂದಿತ್ತು. ಕೆಲವು ಮುಖಂಡರಿಂದಲೂ ಸಹ ಇದರ ಬಗ್ಗೆ ವಿಚಾರಮಾಡಬೇಕೆಂದು ದೂರು ಬಂದಿತ್ತು. ನುಮಾರು 50ಜನ ಚಿಕ್ಕಮಗಳೂರು ಜಿಲ್ಲೆಯ ಪ್ರಾಮುಖ್ಯ ಜನರು ಇಂತಹ ಅಚಾತುರ್ಯ ಅನಾಚಾರ ನಡೆಯುವುದಕ್ಕೆ ಕಾರಣವೇನು ಇದರಿಂದ ಬಡವರಿಗೆ ಬಹಳ ತೊಂದರೆಯಾಗಿದೆ, ಎಷ್ಟೋ ಜನ ಒಬ್ಬರಿಗೊಬ್ಬರು ಸೇರಿಕೊಂಡು ಸೊಸೈಟಿ ಮಾಡಿಕೊಂಡಿದ್ದಾರೆ, ಇದರ ಬಗ್ಗೆ ವಿಚಾರಮಾಡಬೇಕೆಂದು ನಮಗೆ ದೂರು ಸಹ ಬಂದಿದೆ.

ಶ್ರೀ ಕೋಣಂದೂರು ಲಿಂಗಪ್ಪ.— ದೂರು ಯಾರ್ಯಾರು ಕೊಟ್ಟಿದ್ದಾರೋ ಅವರ ಹೆಸರನ್ನು ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅನೇಕ ಮುಖಂಡರು ದೂರು ಕೊಟ್ಟಿದ್ದಾರೆ. ಅವರಲ್ಲಿ ಪ್ರೆಸಿಡೆಂಟ್ ಮತ್ತು ಸೆಕ್ರೆಟರಿಯವರೂ ಸಹ ಒಂದು ದೂರು ಕೊಟ್ಟಿದ್ದಾರೆ. ಅದೂ ಸಹ ಜವಾಬ್ದಾರಿ ಜನರಿಂದಲೇ ಬಂದಿದೆ. ಅವರು ಅವರ ದೂರಿನಲ್ಲಿ ಇಂತಹ ಅತ್ಯಾಚಾರಗಳನ್ನು ತಡೆಗಟ್ಟದೇ ಹೋದರೆ ನಿಜವಾಗಿ ಈ ದೇಶದಲ್ಲಿ ನ್ಯಾಯ ದೊರಕಿಸಿಕೊಡಲು ಕಷ್ಟವಾಗುತ್ತದೆಂದು ಹೇಳಿದ್ದಾರೆ ಆದ್ದರಿಂದ ಅದನ್ನು ಈಗ ವಿಚಾರ ಮಾಡುತ್ತಿದ್ದಾರೆ. ಅದರಲ್ಲಿ ಯಾರದು ಸರಿ ಯಾರದು ತಪ್ಪು ಎಂಬುದನ್ನು ವಿಚಾರಮಾಡಿ ನ್ಯಾಯವನ್ನು ದೊರಕಿಸಿಕೊಡಬೇಕಾಗುತ್ತದೆ,

ಶ್ರೀ ಕೋಣಂದೂರು ಲಿಂಗಪ್ಪ. — ಇದು ನಿಮ್ಮ ಜಿಲ್ಲಾ ಕಾಂಗ್ರೆಸ್‌ನವರು ಕರ್ತವ್ಯ ಎಂಬುದು ಗೊತ್ತೇ ?

SRI S. M. KRISHNA.—I would like to make one humble suggestion So far as Call attention notice is concerned, only those who have sent the notice could ask some clarification. But this type of cross conversation should not become a part of the proceedings I request you kindly to delete all those conversations.

ಶ್ರೀ ಎಂ. ಮಲ್ಲಪ್ಪ.—ತಾವು ಅಲ್ಲಿಗೆ ನೂರು ಜನ ಹೋಗಿದ್ದರು ಲಕ್ಷಾಂತರ ರೂಪಾಯಿ ಗಳನ್ನು ತೆಗೆದುಕೊಂಡು ಹೋಗಿದ್ದು ನ್ಯಾಯವಲ್ಲವೆಂದು ಹೇಳಿದ್ದನ್ನು ನಾನು ನಂಬುವುದಿಲ್ಲ ಮಾನ್ಯ ಮಂತ್ರಿಗಳಿಗೆ ವಿಷಯ ಸರಿಯಾಗಿ ತಿಳಿದಿಲ್ಲ. ಅಲ್ಲಿ ಹೋಗಿದ್ದವರು ಹೆಚ್ಚಿಗೆ ಪ್ಲಾಂಟರ್ಸ್. ಮಾರನೆಯದಿವಸ ಬಟವಾಡೆ ಮಾಡತಕ್ಕವರು. ಅಂತಹವರು ಒಂದು ಯೂನಿಯನ್ ಪರವಾಗಿ ಅಲ್ಲಿಗೆ ಹೋಗಿದ್ದಾಗ, ಅಂತಹ ಸ್ಥಳಕ್ಕೆ ಪೋಲೀಸ್ ಸಿಬ್ಬಂದಿ ಬಂದು ಅವರ ಮೇಲೆ ದಾಳಿ ಮಾಡಿ,ಅವರನ್ನು ಥಳಿಸಿ ಅವರಿಂದ ಹಣವನ್ನು ಲೂಟಿ ಮಾಡಿದ್ದಾರೆಂದು ನಾನು ಭಾವಿಸಿದ್ದೇನೆ. ಅದು ಬಹಳ ತಪ್ಪು. ಯಾರು ಹೊಡೆತ ತಿಂದರೋ ನಾನು ಅವರನ್ನು ಸಹ ನೋಡಿದ್ದೇನೆ. ಅವರನ್ನು ದನಗಳನ್ನು ಅಟ್ಟಿಸಿಕೊಂಡು ಹೊಗುವಂತೆ ಮಾಡಿದ್ದಾರೆ. ಇದರಲ್ಲಿ ತಮಗೇನಾದರೂ ಅನುಮಾನವಿದ್ದರೆ ಏಕೆ ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಬಾರದು ? ತಪ್ಪಿತಸ್ಥರಿಗೆ ಶಿಕ್ಷೆಮಾಡಿ. ಪೋಲೀಸ್‌ನವರಿಗೆ ಈ ರೀತಿ ರಕ್ಷಣೆ ತಾವು ಕೊಟ್ಟರೆ ನಿಜವಾಗಿ ಬಡವರುನ್ಯಾಯ ವಾಗಿರುವುದಕ್ಕೆ ಬಹಳ ಕಷ್ಟವಾಗುತ್ತದೆಯೆಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಸಹ ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಯಾರ್ಯಾರೂ ಬಂದು ಇಲ್ಲ ಪ್ರತ್ಯಕ್ಷವಾಗಿ ನಿಮಗೆ ಹೇಳಿದರೋ ಅವರೇ ನನ್ನಲ್ಲಿ ಬಂದು ಮುಖಾಬಿಲೆ ಯಾಗಿ ಹೇಳಿದ್ದಾರೆಂದು ನಾನು ಹೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಅವರುದೋಚಿರುವುದು 4,611 ರೂಪಾಯಿ ಗಳಲ್ಲ. ಇನ್ನೂ ಹೆಚ್ಚಿಗೆ ಹಣ ಲಪಟಾಯಿಸಿರುವುದನ್ನು ನೀವು ಮರೆಮಾಚಿದ್ದೀರಿ. ಅದರ ಬಗ್ಗೆಏನು ಕ್ರಮ ತೆಗೆದುಕೊಳ್ಳುತ್ತಿರಿ ? ಇದರ ಬಗ್ಗೆ ಕೂಡಲೇ ವಿಚಾರಮಾಡಿ ಸಂಬಂಧಪಟ್ಟ ಅಧಿಕಾರಿಯನ್ನು ಸಸ್‌ಪೆಂಡ್ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂತಹ ಅಧಿಕಾರಿಯನ್ನು ಸಸ್‌ಪೆಂಡ್ ಮಾಡುವ ಪ್ರಮೇಯ ಬಂದ ಪಕ್ಷದಲ್ಲಿ ಅದಕಿಂತಲೂ ಉಗ್ರವಾದ ಕ್ರಮವನ್ನು ಅವರ ಮೇಲೆ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿದೆ.

(ii) *re : Non payment of salaries to teachers at Hindi Maha prachara sabha Prathamika shala, Rajajinagar.*

ಶ್ರೀ ಸಿ. ಬೈರೇಗೌಡ (ವೇಮಗಲ್).—ಬೆಂಗಳೂರು ರಾಜಾಜಿನಗರದಲ್ಲಿನ ಹಿಂದೀ ಮಹಾ ಪ್ರಚಾರ ಸಭಾ ಪ್ರಾಥಮಿಕ ಶಾಲೆಯ ಉಪಾಧ್ಯಾಯರುಗಳಿಗೆ ಸುಮಾರು ಒಂದು ವರ್ಷದಿಂದ ಸಂಬಳವನ್ನು ಪಾವತಿಮಾಡದಿರುವ ವಿಚಾರವನ್ನು ನಾನು ಗಮನಸೆಳೆಯುವ ಸೂಚನೆಯ ಮೂಲಕ ಶಿಕ್ಷಣ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

SRI M. MALLIKARJUNASWAMY (Minister for Education) : I wish to make the following statement.—

Hindi Maha Prachara Sabha Prsimary School, 80 feet Road Rajaji nagar, Bangalore-10, was being run by Shri K. M. Adavisharadhya, as Presibent. It was alleged that he committed mis-appropriation, cheating and forgery in drawing grants of the school. Therefore a police complaint was lodged by the Department.